# ರೋಟರಿ ಸಂಸ್ಥೆಯ ವತಿಯಿಂದ ಸ್ನಾನ ಗೃಹದ ಹಸ್ತಾಂತರ



ಕಾರ್ಕಳ ರೋಟರಿಗೆ ಬಂದ ಮನವಿಯನ್ನಾಧರಿಸಿ ಬಜಗೋಳಿಯ ವಿನಯ ಶೆಟ್ಟಿ ಇವರಿಗೆ ಕಾರ್ಕಳ ರೋಟರಿ ಸಂಸ್ಥೆಯಿಂದ ಸುಮಾರು 35,000 ವೆಚ್ಚದಲ್ಲಿ ನಿರ್ಮಿಸಿಕೊಟ್ಟಿರುವ ಸ್ನಾನ ಗೃಹದ ಹಸ್ತಾಂತರ ಕಾರ್ಯಕ್ರಮವು ದಿನಾಂಕ 07–10–2024ನೇ ಸೋಮವಾರ ನಡೆಸಲಾಯಿತು. ಈ ಸಂದರ್ಭ ರೋಟರಿ ಸಂಸ್ಥೆಯ ಅಧ್ಯಕ್ಷರಾದ ಇಕ್ಬಾಲ್ ಅಹಮದ್, ಕಾರ್ಯದರ್ಶಿ ಗಣೇಶ್ ಸಾಲಿಯಾನ್, ಕೋಶಾಧಿಕಾರಿ ಚೇತನ್ ನಾಯಕ್, ಜಿಲ್ಲಾ ಪ್ರಾಜೆಕ್ಟ್ ಡೈರೆಕ್ಟರ್ ವಸಂತ ಎಂ., ಉಪಾಧ್ಯಕ್ಷರಾದ ಬಾಲಕೃಷ್ಣ ದೇವಾಡಿಗ ಹಾಗೂ ಸತೀಶ್ ಜಿ. ಶೆಟ್ಟಿ ಬಜಗೋಳಿ ಮತ್ತಿತರರು ಉಪಸ್ಥಿತರಿದ್ದರು.

# ರೋಟರಿ ಸಂಸ್ಥೆಯ 14ನೇ ವಾರದ ಸಭೆ




ಕಾರ್ಕಳ ರೋಟರಿ ಸಂಸ್ಥೆಯ 14ನೇ ವಾರದ ಸಭೆಯು ದಿನಾಂಕ 02–10–2024ನೇ ಬುಧವಾರ ಸಾಯಂ. ಗಂಟೆ 6.30ಕ್ಕೆ ಕಾರ್ಕಳ ರೋಟರಿ ಬಾಲಭವನದಲ್ಲಿ ನಡೆಸಲಾಯಿತು. ಕಾರ್ಕಳ ರೋಟರಿ ಸಂಸ್ಥೆಯ ಅಧ್ಯಕ್ಷರಾದ ಇಕ್ಬಾಲ್ ಅಹಮದ್ ಅಧ್ಯಕ್ಷತೆಯನ್ನು ವಹಿಸಿಕೊಂಡರು. ಶ್ರೀ ಉದಯ ಕುಮಾರ್ ಕಡಂಬ ಯೋಗಗುರು ಇವರು ಭಾಗವಹಿಸಿ ಯೋಗ ಹಾಗೂ ಪ್ರಾಣಾಯಾಮದ ಬಗ್ಗೆ ವಿಸ್ತಾರವಾದ ಮಾಹಿತಿಯನ್ನು ನೀಡಿದರು.

ಬುಲೆಟಿನ್ ನಿರ್ದೇಶಕರಾದ ರೊ। ರೇಖಾ ಉಪಾಧ್ಯಾಯ ಇವರ ಮುಂದಾಳತ್ವದಲ್ಲಿ ತಯಾರಾದ 14ನೇ ಸಂಸ್ಥಾ ಪತ್ರಿಕೆಯನ್ನು ರೊ। ಸುವರ್ಣ ನಾಯಕ್ ಇವರು ಬಿಡುಗಡೆಗೊಳಿಸಿದರು.

ಸಂಸ್ಥೆಯ ವತಿಯಿಂದ ಒಂದು ರೋಟರಿ ಸದಸ್ಯರ ವಿವಾಹ ವಾರ್ಷಿಕೋತ್ಸವದ ಪ್ರಯುಕ್ತ ಅಭಿನಂದಿಸಿ ಅವರಿಗೆ ಅಧ್ಯಕ್ಷರ ವತಿಯಿಂದ ಗಿಫ್ಟನ್ನು ನೀಡಲಾಯಿತು. ಈ ವಾರದ ಕ್ವಿಜ್ ಅನ್ನು ರೊ। ರೇಖಾ ಉಪಾಧ್ಯಾಯರು ನಡೆಸಿ, ರೊ। ಅರುಣ ಎಂ. ಶೆಣೈ ಹಾಗೂ ರೊ। ಆಶಾ ಪಿ. ಹೆಗ್ಡೆ ಆಯ್ಕೆಯಾಗಿರುತ್ತಾರೆ. ಲಕ್ಕಿ ರೋಟರಿ ಸದಸ್ಯರಾಗಿ ರೊ। ರೋಶನ್ ಡಿ'ಮೆಲ್ಲೋ ಇವರು ಆಯ್ಕೆಯಾಗಿರುತ್ತಾರೆ.

ಇಂದಿನ ವಾರದ ಉಪಹಾರದ ಪ್ರಾಯೋಜಕರಾದ ರೊ। ರೋಶನ್ ದಂಪತಿಗಳಿಗೆ ಧನ್ಯವಾದಗಳು. ಕಾರ್ಯದರ್ಶಿ ರೊ। ಗಣೇಶ ಸಾಲಿಯಾನ್ ವಂದನಾರ್ಪಣೆಗೈದರು.




Stephanie A. Urchick
RI President


Rtn. CA Dev Anand
District Governor

SERVICE ABOVE SELF

# SERVICE


Rtn. Iqbal Ahmed
President


Rtn. Ganesh Salian
Secretary

THE OFFICIAL HOUSE BULLETIN OF

Rotary

## ROTARY CLUB KARKALA

THE MAGIC OF ROTARY

ZONE- 5, R.I. DIST.3182   Club No. 15726   Charter Date : 09-03-1964.

61 YEARS

WEEKLY EDITION   OCT 09, 2024   ISSUE - 15

Vice President :
Rtn. Balakrishna Devadiga
Mob : 9845838898

Immediate Past President :
Rtn. John R. D'silva
Mob : 9845015793

Joint Secretary :
Rtn. Anthony Elias D'silva
Mob : 9606813167

Treasurer :
Rtn. Chethan Nayak
Mob : 9880726811

Sargeant at arms :
Rtn. Shreesha Bhat
Mob : 9986795950

DIRECTORS

President Elect &
Club Service Director :
Rtn. Naveen Shetty
Mob : 9448254344

Vocational Service :
Rtn. Shekar H.
Mob : 9008031537

Community Service :
Rtn. Soujanya Upadhyaya
Mob : 9845356244

International Service :
Rtn. Yogish Prabhu
Mob : 9108749676

New Generation & Youth Service :
Rtn. Harshini V. Shetty
Mob : 9880644905

Chairman Club Membership
Rtn. Sandeep Jain
Mob : 9901894084

Chairman T.R.F.
Rtn. Hariprakash Shetty
Mob : 9632826562

Chairman Public Image
Rtn. Madhukar Hegde
Mob : 9972354497

Chairman Pulse Polio :
Rtn. Dr. Jnanesh Kamath
Mob : 9845212442

I.T. Website :
Rtn. Venugopal P.S.
Mob : 9902518746

District Project :
Rtn. Vasanth M.
Mob : 9449166492

Bulletin Editor :
Rtn. Rekha Upadhyaya
Mob : 9900213535

# 70ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಸ್ವಚ್ಛತಾ ಕಾರ್ಯಕ್ರಮ






ಕುದುರೆಮುಖ ವನ್ಯಜೀವಿ ವಿಭಾಗ ಇವರ ವತಿಯಿಂದ ದಿನಾಂಕ 07–10–2024ನೇ ರವಿವಾರ 70ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಮಾಳ ಗೇಟ್‌ನಿಂದ ಎಸ್‌ಕೆ ಬಾರ್ಡರ್‌ನವರೆಗೆ ಎಲ್ಲಾ ಸಂಘ ಸಂಸ್ಥೆಗಳ ಸುಮಾರು 300 ಸದಸ್ಯರೊಂದಿಗೆ ಪರಿಸರ ಸ್ವಚ್ಛತಾ ಕಾರ್ಯಕ್ರಮವನ್ನು ನಡೆಸಲಾಯಿತು. (3ನೇ ಪುಟಕ್ಕೆ)

We meet on every Wednesday 6.30 pm at Rotary Bala Bhavan, Court Road
Behind Ananthashayana Temple, Karkala - 574104

## *From the Editors Desk*



Dear friends in Rotary,

We are Celebrating the Dasara Festival , 9 days of celebration of happiness, colourfulness and joyness, Let us quell Kama, krodha, Anger, Moha, Greed, Mada, Matsara, Jealousy, finally Ahankara our Ego, Navratri has started may all your demo be Conqured ! Let me again take this opportunity to pray for the well being of all "

*Thank you.*

Your's in Rotary

**Rtn Rekha Upadhyaya**

## ROTARY INFORMATION




### Happy Birthday

Oct 10 **Rtn Dr. Ramachandra Joishy**

Oct 14 **Rtn Shailendra Rao**



**(1ನೇ ಪುಟದಿಂದ)** ಈ ಸಂದರ್ಭದಲ್ಲಿ ಮುಖ್ಯ ಅಧೀಕ್ಷಕರಾದ ಎಸ್.ಪಿ ಅರುಣ್ ಕುಮಾರ್, ವನ್ಯಜೀವಿ ವಿಭಾಗ ಸಂರಕ್ಷಣಾಧಿಕಾರಿ ಶಿವರಾಮ್, ಉಪ ಸಹಾಯಕ ಸಂರಕ್ಷಣಾಧಿಕಾರಿ ಸತೀಶ್, ಕಾರ್ಕಳ ರೋಟರಿ ಸಂಸ್ಥೆಯ ಅಧ್ಯಕ್ಷರಾದ ಇಕ್ಬಾಲ್ ಅಹಮದ್, ಕಾರ್ಯದರ್ಶಿ ಗಣೇಶ್ ಸಾಲಿಯಾನ್, ಸಮುದಾಯ ಸೇವಾ ನಿರ್ದೇಶಕರಾದ ಸೌಜನ್ಯ ಉಪಾಧ್ಯಾಯ, ರೋಟರ್ಯಾಕ್ಟ್ ಡಿಆರ್‌ಆರ್ ಚೇತನ್, ರೋಟರ್ಯಾಕ್ಟ್ ಅಧ್ಯಕ್ಷ ಸುನಿಲ್ ನಾಯಕ್ ಹಾಗೂ ಕಾರ್ಕಳ ರೋಟರಿ ಕ್ಲಬ್ ರಾಕ್‌ಸಿಟಿಯ ಸದಸ್ಯರುಗಳು, ಸರಕಾರಿ ಪದವಿ ಪೂರ್ವ ಕಾಲೇಜು ಬಜಗೋಳಿಯ ರಾಷ್ಟ್ರೀಯ ಸ್ವಯಂ ಸೇವಾ ಘಟಕದ ಸದಸ್ಯರುಗಳು, ಸೈಕಲ್ ಕ್ಲಬ್, ಹಾಸ್ಟೆಲ್ ಯೂತ್ ಅಸೋಸಿಯೇಶನ್ ಮಂಗಳೂರು, ಮುಡಾರು ಗ್ರಾಮ ಪಂಚಾಯತ್, ಮಾಳ ಗ್ರಾಮ ಪಂಚಾಯತ್, ಸ್ವಚ್ಛತಾ ಸಿಬ್ಬಂದಿಗಳು ಹಾಗೂ ವನ್ಯಜೀವಿ ವಿಭಾಗದ ಸಿಬ್ಬಂದಿಗಳು ಭಾಗವಹಿಸಿರುತ್ತಾರೆ.

## ಕಾನೂನು ಅರಿವು ಮತ್ತು ಮಾಹಿತಿ ಕಾರ್ಯಕ್ರಮ




ತಾಲೂಕು ಕಾನೂನು ಸೇವೆಗಳ ಸಮಿತಿ ಕಾರ್ಕಳ, ನ್ಯಾಯವಾದಿಗಳ ಸಂಘ (ರಿ.) ಕಾರ್ಕಳ, ರೋಟರಿ ಕ್ಲಬ್ ಕಾರ್ಕಳ ಇವರ ಸಂಯುಕ್ತ ಆಶ್ರಯದಲ್ಲಿ ಭಂಡಾರಿ ಸಮಾಜ ಸಂಘ (ರಿ.) ಕಾರ್ಕಳ, ರೋಟರಿ ಸಮುದಾಯದಳ ಕಾಳಿಕಾಂಬ ಕಾರ್ಕಳ, ರೋಟರಿ ಆ್ಯನ್ಸ್ ಕ್ಲಬ್ ಕಾರ್ಕಳ ಹಾಗೂ ಕಾರ್ಕಳ ತಾಲೂಕು ಹಿರಿಯ ನಾಗರಿಕರ ಸಂಘ (ರಿ.) ಇವರ ಸಹಯೋಗದೊಂದಿಗೆ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯ ಅಂಗವಾಗಿ ದಿನಾಂಕ 03–10–2024ನೇ ಗುರುವಾರ ರೋಟರಿ ಬಾಲಭವನದಲ್ಲಿ ಕಾನೂನು ಅರಿವು ಮತ್ತು ಮಾಹಿತಿ ಕಾರ್ಯಕ್ರಮವನ್ನು ನಡೆಸಲಾಯಿತು.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶೆ ಶ್ರೀಮತಿ ಕೋಮಲ ಆರ್.ಸಿ. ಕಾರ್ಯಕ್ರಮ ಉದ್ಘಾಟಿಸಿ ಹಿರಿಯ ನಾಗರಿಕರಿಗೆ ಕಾನೂನಿನಲ್ಲಿರುವ ಸವಲತ್ತುಗಳ ಬಗ್ಗೆ ಅರಿವಿರಬೇಕು. ತಮ್ಮ ಇಳಿ ವಯಸ್ಸಿನಲ್ಲಿ ನೆಮ್ಮದಿಯಿಂದ ಬದುಕಲು ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕು ಎಂದು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ರೋಟರಿ ಕ್ಲಬ್ ಅಧ್ಯಕ್ಷ ಇಕ್ಬಾಲ್ ಅಹಮದ್ ಸ್ವಾಗತಿಸಿದರು. ಕಾರ್ಕಳ ನ್ಯಾಯವಾದಿ ಶ್ರೀಮತಿ ಶುಭ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡಿದರು.

ಮುಖ್ಯ ಅತಿಥಿಯಾಗಿ ಕಾರ್ಕಳ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಸುನಿಲ್ ಕುಮಾರ್ ಶೆಟ್ಟಿ, ಹಿರಿಯ ನಾಗರಿಕರ ಸಂಘದ ಅಧ್ಯಕ್ಷ ಕೆ. ವಾಸುದೇವ ರಾವ್, ಭಂಡಾರಿ ಸಮಾಜ ಸಂಘದ ಅಧ್ಯಕ್ಷ ಶೇಖರ್ ಹೆಚ್., ಆ್ಯನ್ಸ್ ಕ್ಲಬ್ ಅಧ್ಯಕ್ಷರ ವಿನಯ ಶೆಟ್ಟಿ, ರೋಟರಿ ಸಮದಾಯದಳ ಅಧ್ಯಕ್ಷೆ ರಮಾ ಉಪಸ್ಥಿತರಿದ್ದರು.

ನ್ಯಾಯವಾದಿಗಳ ಸಂಘದ ನಿಕಟಪೂರ್ವ ಕಾರ್ಯದರ್ಶಿ ಪದ್ಮಪ್ರಸಾದ್ ಜೈನ್ ನಿರೂಪಿಸಿದರು. ವಸಂತ್ ಎಂ. ವಂದಿಸಿದರು.